# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **685** |
| **ಸದಸ್ಯರ ಹೆಸರು** | : | **ಶ್ರೀ ಮೋಹನ್‌ಕುಮಾರ್ ಕೊಂಡಜ್ಜಿ (ನಾಮ ನಿರ್ದೇಶನ ಹೊಂದಿದವರು)** |
| **ಉತ್ತರಿಸುವ ದಿನಾಂಕ** | : | **22-09-2022** |
| **ಉತ್ತರಿಸುವ ಸಚಿವರು** | : | **ಮಾನ್ಯ ಮುಖ್ಯಮಂತ್ರಿ** |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಮನಗರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕು ವಿರೂಪಾಕ್ಷಿಪುರ ಹೋಬಳಿ ಭೂಹಳ್ಳಿ ಗ್ರಾಮದ ಸರ್ವೆ ನಂ.104 ರ ಜಿಲ್ಲಾ ಅರಣ್ಯ ಪ್ರದೇಶದಲ್ಲಿ ಪ್ರಭಾವಿ ವ್ಯಕ್ತಿಯೊಬ್ಬರು ಸುಮಾರು 11 ಎಕರೆ ಅರಣ್ಯ ಜಮೀನನ್ನು ಅನಧಿಕೃತವಾಗಿ ಒತ್ತುವರಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು) | ಭೂಹಳ್ಳಿ ಗ್ರಾಮದ ಸರ್ವೆ ನಂ.104ರಲ್ಲಿ ಕಂದಾಯ ದಾಖಲಾತಿಯಾದ ಆರ್.ಟಿ.ಸಿ.ಯಲ್ಲಿ ಒಟ್ಟು 425-36 ಎಕರೆ/ಗುಂಟೆ ಪ್ರದೇಶವಿದ್ದು, ಈ ಪೈಕಿ ಒಟ್ಟು 359-22 ಎಕರೆ/ಗುಂಟೆ ಪ್ರದೇಶ "ಜಿಲ್ಲಾ ಅರಣ್ಯ" ಎಂದು ನಮೂದಾಗಿರುತ್ತದೆ.<br>ಶ್ರೀ ಹನುಮಂತಪ್ಪ ಬಿನ್ ಲೇ॥ ವೆಂಕಟಯ್ಯ, ಭೂಹಳ್ಳಿ ಗ್ರಾಮ, ವಿರುಪಾಕ್ಷಿಪುರ ಹೋ॥, ಚನ್ನಪಟ್ಟಣ ತಾ॥ ಇವರು ಭೂಹಳ್ಳಿ ಸ.ನಂ. 104ರ ಸರ್ಕಾರಿ ಜಿಲ್ಲಾ ಅರಣ್ಯದಲ್ಲಿ ಸುಮಾರು 11-00 ಎಕರೆ 12 ಗುಂಟೆ ಪ್ರದೇಶದಲ್ಲಿ ಅನಧಿಕೃತವಾಗಿ ಪ್ರವೇಶಿಸಿ ಅರಣ್ಯ ಒತ್ತುವರಿ ಮಾಡಿದ್ದು, ಈ ಸಂಬಂಧ ದಿನಾಂಕ: 06.01.2021ರಂದು ಅರಣ್ಯ ಮೊಕದ್ದಮೆ ಸಂಖ್ಯೆ: 18/2020-21 ದಾಖಲು ಮಾಡಿ ನಿಯಮಾನುಸಾರ ಒತ್ತುವರಿಯನ್ನು ತೆರವು ಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |
| ಆ) | ಬಂದಿದ್ದಲ್ಲಿ, ಮೊಕದ್ದಮೆ ದಾಖಲಿಸಿ ಒತ್ತುವರಿ ತೆರವುಗೊಳಿಸಲಾಗಿದಯೇ; (ವಿವರ ನೀಡುವುದು) | |
| ಇ) | ಇಲ್ಲವಾದಲ್ಲಿ, ಅರಣ್ಯ ಜಮೀನು ಒತ್ತುವರಿಯಾಗಿದ್ದರೂ ಸಹ ಈವರೆಗೂ ಒತ್ತುವರಿ ತೆರವು ಗೊಳಿಸದಿರಲು ಹಾಗೂ ಮೊಕದ್ದಮೆ ಹೂಡದಿರಲು ಕಾರಣಗಳೇನು;(ವಿವರ ನೀಡುವುದು) | ಉದ್ಭವಿಸುವುದಿಲ್ಲ. |
| ಈ) | ಹಾಗಿದ್ದಲ್ಲಿ, ಒತ್ತುವರಿ ತೆರವುಗೊಳಿಸದೇ ಹಾಗೂ ಮೊಕದ್ದಮೆ ದಾಖಲಿಸದೆ ಕರ್ತವ್ಯ ಲೋಪವೆಸಗಿರುವ ಅರಣ್ಯಾಧಿಕಾರಿಗಳ ವಿರುದ್ಧ ಸರ್ಕಾರ ಯಾವ ಕ್ರಮಕೈಗೊಂಡಿದೆ; (ವಿವರ ನೀಡುವುದು) | |
| ಉ) | ಯಾವ ಕಾಲಮಿತಿಯಲ್ಲಿ ಒತ್ತುವರಿ ತೆರವುಗೊಳಿಸಿದ, ಒತ್ತುವರಿದಾರರ ವಿರುದ್ಧ ಮೊಕದ್ದಮೆ ಹೂಡಲಾಗುವುದು ಹಾಗೂ ಅರಣ್ಯಾಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು? (ವಿವರ ನೀಡುವುದು) | |

**ಸಂಖ್ಯೆ: ಅಪಜೀ 39 ಎಫ್‌ಜಿಎಲ್ 2022**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ